ದಿನಾಂಕ 03-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ಡಿ. ಯು ವಕೀಲರವರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ.

ಸಾಕ್ಷಿಗೆ ನಿಪಿ.10 ರ ಸಹಿಯನ್ನು ತೋರಿಸಲಾಗಿದ್ದು ಸಾಕ್ಷಿ ಗುರುತಿಸಿದ್ದು, ನಿಪಿ.10(ಎ) ಎಂದು ಗುರುತಿಸಲಾಯಿತು.

| | |
|---|---|
| ನಿಪಿ-16 | ಕೇಸ್ ಶೀಟ್, |

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಿಂದಃ**

ಅರ್ಜಿದಾರರು ನಮ್ಮ ಆಸ್ಪತ್ರೆ ಯಲ್ಲಿ ಎರಡು ದಿನ ಒಳ ರೋಗಿಯಾಗಿದ್ದರು. ಎರಡು ದಿನ ಒಳ ರೋಗಿಯಾಗಿರುವಾಗ ನಾನೇ ಚಿಕಿತ್ಸೆ ನಾನೇ ನೀಡಿದ್ದೆ. ಅರ್ಜಿದಾರರು ಈಗ ಗುಣಮುಖವಾಗಿದ್ದಾರೆ. ಅರ್ಜಿದಾರರಿಗೆ ಕೆಲಸ ಮಾಡಲು ಹೆಚ್ಚಿ ನ ಪ್ರಮಾಣದಲ್ಲಿ ತೊಂದರೆ ಇಲ್ಲ ಮತ್ತು ಬೆಡ್ ರೆಸ್ಟ್ ಇಲ್ಲ. ನನ್ನ ಬಳಿ ಅವರು ರಿಕವರಿ ಏಜೆಂಟ್ ಆಗಿ ಕೆಲಸ ಮಾಡುತ್ತೇನೆ ಎಂದು ಹೇಳಿರುತ್ತಾರೆ. ಈಗ ಇರುವ ನೋವು ಈಗ ಅವರಿಗೆ ಕೆಲಸ ಮಾಡಲು ಏನೂ ತೊಂದರೆ ಕೊಡುವುದಿಲ್ಲ.

ನಾನು ಗಾಯದ ಪ್ರಮಾಣ ಪತ್ರ ನೀಡಿರುವುದಿಲ್ಲ. ಮತ್ತು ಡಿಸ್ಚಾರ್ಜ್ ಸಮ್ಮರಿ ನೀಡಿರುವುದಿಲ್ಲ. ಅಂಗನ್ಯೂನತಾ ಪ್ರಮಾಣ ಪತ್ರ ವನ್ನು ನಾನು ಸಕಾರಣ ಇಲ್ಲದೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿ ನ ಪರಿಹಾರ ಸಿಗಲಿ ಎಂಬ

ಏಕೋದ್ದೇಶದಿಂದ ಅಂಗನ್ಯೂನತಾ ಪ್ರಮಾಣ ಪತ್ರ  ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ನೀಡಿದ ಅಂಗನ್ಯೂನತೆ ಅರ್ಜಿದಾರರಿಗೆ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಹೆ.ಹಿ.ಸಿ.ನ್ಯಾ ಉಡುಪಿ.